ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರಕಛೇರಿ. ಎನ್.ಆರ್.ಚೌಕ, ಬೆಂಗಳೂರು

ಸಂಖ್ಯೆ:ಆ/ಪಿಎಸ್ಆರ್(ಜಿ)/3027/2019-20 ದಿನಾಂಕ: 21.09.2019

# ಕಛೇರಿಆದೇಶ

**ವಿಷಯ:** ಓ.ಎಫ್.ಸಿ. ಅಳವಡಿಕೆ ಅನುಮತಿ ನಿಡುವ ಸಂದರ್ಭದಲ್ಲಿThe Building And Other Construction Workers' Welfare Cess Act, 1996 ಪ್ರಕಾರ Cess ಸಂಗ್ರಹಿಸಿ Building and Other Construction Workers' Welfare Boardಗೆ ಪಾವತಿ ಮಾಡುವ ಬಗ್ಗೆ

## ಪ್ರಸ್ತಾವನೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಓ.ಎಫ್.ಸಿ. ಅಳವಡಿಕೆಗೆ ಪಾಲಿಕೆಯು ಪರವಾನಿಗೆ ನೀಡುತ್ತಿದೆ. ಸದರಿ ಪರವಾನಿಗೆ ನೀಡುವ ಸಂದರ್ಭದಲ್ಲಿ ಪರವಾನಿಗೆ ಶುಲ್ಕ, ಮೇಲ್ವಿಚಾರಣಾ ಶುಲ್ಕ ಮತ್ತು ಭದ್ರತಾಠೇವಣಿ ಪಡೆದುಕೊಳ್ಳಲಾಗುತ್ತಿದ್ದರೂ ಕಛೇರಿ ಆದೇಶವಿಲ್ಲದ Building And Other Construction Workers' Welfare Cessನ್ನು ಸಂಗ್ರಹಿಸಲಾಗುತ್ತಿರುವುದಿಲ್ಲ.

The Building And Other Construction Workers' Welfare Cess Act, 1996ರಂತೆ

**3. Levy and collection of cess.—**

*(1) There shall be levied and collected a cess for the purposes of the Building and Other Construction Workers (Regulation of Employment and Conditions of Service) Act, 1996 (27 of 1996), at such rate not exceeding two per cent. but not less than one per cent. of the cost of construction incurred by an employer, as the Central Government may, by notification in the Official Gazette, from time to time specify.*

*(2) The cess levied under sub-section (1) shall be collected from every employer in such manner and at such time, including deduction at source in relation to a building or other construction work of a Government or of a public sector undertaking or* ***advance collection through a local authority where an approval of such building or other construction work by such local authority is required, as may be prescribed.***

*(3) The proceeds of the cess collected under sub-section (2) shall be paid by the local authority or the State Government collecting the cess to the Board after deducting the cost of collection of such cess not exceeding one per cent. of the amount collected.*

*(4) Notwithstanding anything contained in sub-section (1) or sub-section (2), the cess leviable under this Act including payment of such cess in advance may,* ***subject to final assessment to be made, be collected at a uniform rate or rates as may be prescribed on the basis of the quantum of the building or other construction work involved.***ಎಂದು ನಿಯಮ ವಿಧಿಸಲಾಗಿದೆ.

ಸದರಿ ನಿಯಮಗಳಂತೆ ಸ್ಥಳೀಯ ಸಂಸ್ಥೆಯು ತಾನು ಕಟ್ಟಡ ಮತ್ತು ಇತರ ನಿರ್ಮಾಣಗಳಿಗೆ ಅನುಮತಿ ನೀಡುವಾಗ ಕಟ್ಟಡ ಮತ್ತು ಇತರ ನಿರ್ಮಾಣಗಳ ಗಾತ್ರ ಅಥವಾ ಪರಿಮಾಣವನ್ನು ಅವಲಂಬಿಸಿ ಏಕರೂಪದ ದರದಲ್ಲಿ ಮುಂಗಡವಾಗಿ ವಸೂಲು ಮಾಡಬೇಕಿದೆ. ಪಾಲಿಕೆಯಲ್ಲಿ ಓ.ಎಫ್.ಸಿ.ಅನುಮತಿ ನೀಡುವ ಸಂದರ್ಭದಲ್ಲಿ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಸೆಸ್ ವಸೂಲಾತಿ ಮಾಡದ ಹಿನ್ನೆಲೆಯಲ್ಲಿ ಆಡಿಟ್ ಸಂದರ್ಭದಲ್ಲಿ ಸದರಿ ಮೊತ್ತವನ್ನು ಸಂಬಂಧಪಟ್ಟ ಸಂಸ್ಥೆಗಳಿಂದ ವಸೂಲು ಮಾಡಲು ಸೂಚಿಸಲಾಗಿರುತ್ತದೆ.

ಆದರೆ ಓ.ಎಫ್.ಸಿ. ಸಂಸ್ಥೆಗಳು ಬೇರೆ ಬೇರೆ ದರದಲ್ಲಿ ಅಳವಡಿಕೆ ಗುತ್ತಿಗೆ ನೀಡುತ್ತಿರುವುದರಿಂದ ಮತ್ತು ಸದರಿ ಗುತ್ತಿಗೆ ದರದಲ್ಲಿ 2017-18ನೇ ಸಾಲಿನ ಓ.ಎಫ್.ಸಿ.ಕೋಶದ ಆಡಿಟ್‌ಗೆ ಸಂಬಂಧಿಸಿದಂತೆ ಆಡಿಟ್ ವಿಭಾಗ ಓ.ಎಫ್.ಸಿ. ಅಳವಡಿಕೆಗೆ ಪ್ರತಿ ಮೀಟರಿಗೆ ಟೆಲಿಕಾಂ ರೆಗ್ಯೂಲಾರಿಟಿ ಅಥಾರಿಟಿ ಆಫ್ ಇಂಡಿಯಾದ ನೋಟಿಫಿಕೇಶನ್ ಸಂಖ್ಯೆ: 04/2014 ದಿನಾಂಕ: 14-07-2014ರ (Telecom Regularity Authority of India The telecommunication Tariff (Fifty Seventh Amendment) Order, 2014 No.4 of 2014 Notification New Delhi the 14th July 2014) ಪುಟ ಸಂಖ್ಯೆ: 25 ರಲ್ಲಿ ದರಗಳನ್ನು ವಿವರಿಸಲಾಗಿದ್ದು, ಅದರಂತೆ, ಓ.ಎಫ್.ಸಿ ಅಳವಡಿಕೆಗೆ ಆಗುವ ಬಂಡವಾಳ ರೂ.7,39,530/- ಪ್ರತಿ ಕಿ.ಮೀ ಪರಿಗಣಿಸಿ ಅದರ ಮೊತ್ತದಲ್ಲಿ ಶೇಕಡ 1% ರಷ್ಟು ಮೊತ್ತವನ್ನು ಕಟ್ಟಡ ಮತ್ತು ಇತರೆ ಕಾಮಗಾರಿಗಳ ಕಾರ್ಮಿಕರ ಕಲ್ಯಾಣ ನಿಧಿಗೆ ಓ.ಎಫ್.ಸಿ ಸೇವಾ ಸಂಸ್ಥೆರವರಿಂದ ಕಟಾವು ಮಾಡಿ ಸಂಬಂಧಿಸಿದ ಇಲಾಖೆಗೆ ಪಾವತಿಸುವಂತೆ ಸೂಚಿಸಿರುತ್ತಾರೆ.

ಸದರಿ ವೆಚ್ಚಕ್ಕೆ 1% ಅಂದರೆ **ರೂ 7395/-**ಪ್ರತಿ ಕಿ.ಮೀ (ರೂ7.39ಪ್ರತಿ ಮೀಟರ್) ರಂತೆ, ಶುಲ್ಕ ವಸೂಲಾತಿ ಮಾಡಬೇಕಿರುತ್ತದೆಯೆಂದು ವರದಿ ಮಾಡಿರುತ್ತದೆ. ಈ ಹಿನ್ನೆಲೆಯಲ್ಲಿ ಓ.ಎಫ್.ಸಿ. ಅಳವಡಿಕೆ ಅನುಮತಿ ನಿಡುವ ಸಂದರ್ಭದಲ್ಲಿ Building And Other Construction Workers' Welfare Cess ಪಡೆದುಕೊಳ್ಳುವ ಬಗ್ಗೆ ಈ ಕೆಳಗಿನಂತೆ ಆದೇಶಿಸಿದೆ.

**ಆದೇಶ**

ಓ.ಎಫ್.ಸಿ. ಅಳವಡಿಕೆ ಅನುಮತಿ ನಿಡುವ ಸಂದರ್ಭದಲ್ಲಿ Building And Other Construction Workers' Welfare Cess ಪಡೆದುಕೊಳ್ಳುವ ಸಲುವಾಗಿ 2017-18ನೇ ಸಾಲಿನ ಓ.ಎಫ್.ಸಿ.ಕೋಶದ ಆಡಿಟ್ ವರದಿಯ ಆಧಾರದ ಮೇಲೆ ಪ್ರತಿ ಮೀಟರಿಗೆ **ರೂ. 7.39** ಪ್ರತಿ ಮೀಟರ್‌ಗೆ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಸೆಸ್ ಆಗಿ ಡಿಮ್ಯಾಂಡ್ ನೋಟ್‌ನಲ್ಲಿ ಅಳವಡಿಸಿ ವಸೂಲು ಮಾಡಲು ಸೂಚಿಸಿದೆ. ಈ ಹಿಂದೆ ಓ.ಎಫ್.ಸಿ. ಅಳವಡಿಕೆಗೆ ಅನುಮತಿ ನೀಡುವಾಗ ಕಟ್ಟಡ ಮತ್ತು ಇತರ ನಿರ್ಮಾಣಕಾರ್ಮಿಕರಕಲ್ಯಾಣ ಸೆಸ್ ವಸೂಲಿ ಮಾಡದಿದ್ದ ಪಕ್ಷದಲ್ಲಿ ಸದರಿ ಸಂಸ್ಥೆಗಳಿಗೆ ಕೂಡಲೇ ನೋಟೀಸ್ ಜಾರಿ ಮಾಡಿ ಬಾಕಿ ಇರುವ ಸೆಸ್‌ನ್ನು ನಿಗದಿತ ಅವಧಿಯೊಳಗಾಗಿ (30 ದಿನಗಳ ಕಾಲಾವಕಾಶ) ಪಾವತಿಸಲು ಸೂಚಿಸುವುದು. ಸದರಿ ಅವಧಿಯಲ್ಲಿ ಸೆಸ್‌ನ್ನು ಸಂಸ್ಥೆ ಪಾವತಿಸದ ಪಕ್ಷದಲ್ಲಿ ಪಾಲಿಕೆಯಲ್ಲಿ ಲಭ್ಯವಿರುವ ಮತ್ತು 2ವರ್ಷಕ್ಕೂ ಮೇಲ್ಪಟ್ಟಿರುವ ಸದರಿ ಸಂಸ್ಥೆಯವರ ಭದ್ರತಾ ಠೇವಣಿಯಿಂದ ಕಟಾವು ಮಾಡಿ ಸೆಸ್ ಪಾವತಿಸುವುದು. 2ವರ್ಷಕ್ಕೂ ಮೇಲ್ಪಟ್ಟಿರುವ ಭದ್ರತಾಠೇವಣಿ ಅಗತ್ಯ ಮೊತ್ತಕ್ಕೆ ಲಭ್ಯವಿಲ್ಲದ ಪಕ್ಷದಲ್ಲಿ ಲಭ್ಯವಿರುವ ಭದ್ರತಾ ಠೇವಣಿಗೆ ಹೊಂದಾಣಿಕೆ ಮಾಡುವುದು. ಸೆಸ್ ವಸೂಲಾತಿ ಸಮಯದಲ್ಲಿ ಪ್ರಸಕ್ತ ಸಾಲಿನ ಬಾಕಿಗೆ ಪ್ರಥಮ ಪ್ರಾಶಸ್ತ್ಯ ನೀಡಿ ಆನಂತರದಲ್ಲಿ ಹಿಂದಿನ ಅಗತ್ಯವಿದ್ದಲ್ಲಿ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಸೆಸ್ ಪಾವತಿಸದ ಸಂಸ್ಥೆಯವರಿಗೆ ಓ.ಎಫ್.ಸಿ.ಅಳವಡಿಕೆ ಪರವಾನಿಗೆಯನ್ನು ನೀಡುವುದನ್ನು ಸೆಸ್ ಪಾವತಿಸುವವರೆಗೆ ತಡೆಹಿಡಿಯಲು ಸೂಚಿಸಿದೆ.

ಆಯುಕ್ತರು 21/9/2015

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

***ಪ್ರತಿ:***

1. ವಿಶೇಷ ಆಯುಕ್ತರು, ಯೋಜನೆ/ಹಣಕಾಸು
2. ಪ್ರಧಾನಅಭಿಯಂತರರು
3. ಮುಖ್ಯಅಭಿಯಂತರರು (ಓ.ಎಫ್.ಸಿ.ಕೋಶ) ಸೂಕ್ತ ಕ್ರಮಕ್ಕಾಗಿ
4. ಮುಖ್ಯಅಭಿಯಂತರರು (ರಸ್ತೆ ಮೂಲಭೂತ ಸೌಕರ್ಯ) ಸೂಕ್ತ ಕ್ರಮಕ್ಕಾಗಿ
5. ಎಲ್ಲಾ ವಲಯಗಳ ಜಂಟಿಆಯುಕ್ತರು ಮತ್ತು ಮುಖ್ಯಅಭಿಯಂತರರಿಗೆಸೂಕ್ತ ಕ್ರಮಕ್ಕಾಗಿ
6. ಪಾಲಿಕೆಯ ಮಾಹಿತಿತಂತ್ರಜ್ಞಾನ ಸಲಹೆಗಾರರಿಗೆ - ಪಾಲಿಕೆಯಜಾಲತಾಣದಲ್ಲಿಕಛೇರಿಆದೇಶವನ್ನು ಪ್ರಚುರಪಡಿಸುವುದಕ್ಕಾಗಿ.
7. ಕಛೇರಿಕಡತಕ್ಕೆ.